**ಸಾಕ್ಷಿಯನ್ನು ದಿಃ 12.01.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಆರ್ ಕೆ ವಕೀಲರಿಂದಃ**

ಮೃತ ನಂಜಪ್ಪ ನನ್ನ ತಂದೆ. ಅವರ ಜನ್ಮ ದಿನಾಂಕ 13.11.1965 ಎಂದರೆ ಸರಿ. ನನಗೆ ಮದುವೆ ಆಗಿಲ್ಲ. ನಾನು ತರಕಾರಿ ಹಾಗೂ ಹಸು ಮಾರಾಟದ ಕೆಲಸ ಮಾಡುತ್ತೇನೆ. ತಿಂಗಳಿಗೆ ಮೂರು ಸಾವಿರ ಆದಾಯ ಪಡೆಯುತ್ತೇನೆ. ನಮಗೆ ವ್ಯವಸಾಯದ ಜಮೀನು ಇಲ್ಲ. ಆದ್ದರಿಂದ ನನ್ನ ತಂದೆ ವ್ಯವಸಾಯ ಮಾಡುತ್ತಿರಲಿಲ್ಲ ಎಂದರೆ ಸರಿ. ಆದ್ದರಿಂದ ನನ್ನ ತಂದೆಗೆ ಆದಾಯ ಇರಲಿಲ್ಲ ಎಂದರೆ ಅವರೂ ಸಹ ತರಕಾರಿ ಹಾಗೂ ಹಣ್ಣಿನ ವ್ಯಾಪಾರ ಮಾಡುತ್ತಿದ್ದರು. ಅವರಿಗೆ ತಿಂಗಳಿಗೆ ಮೂರು ಸಾವಿರ ಸಂಪಾದನೆ ಇತ್ತು.

2) ನನ್ನ ಅಕ್ಕ ಆಶಾ ಮದುವೆ ಆಗಿದ್ದಾರೆ. ನನ್ನ ಭಾವ ಮೃಗಾಲಯದಲ್ಲಿ ಕೆಲಸ ಮಾಡುತ್ತಾರೆ. ನನ್ನ ಅಕ್ಕ ಗೃಹಿಣಿ ಆಗಿರುತ್ತಾರೆ. ನನ್ನ ಅಕ್ಕ ಮದುವೆ ಆದ ನಂತರ ಪ್ರತ್ಯೇಕ ವಾಸ ಇದ್ದಾರೆ ಎಂದರೆ ಸರಿ. 3 ನೇ ಅರ್ಜಿದಾರರಿಗೂ ಮದುವೆ ಆಗಿರುತ್ತದೆ. ಅವರೂ ಸಹ ಗೃಹಿಣಿ ಆಗಿರುತ್ತಾರೆ. ನನ್ನ ಅಕ್ಕಂದಿರು ಮದುವೆ ಆಗಿ ಪ್ರತ್ಯೇಕ ವಾಸ ಇರುವ ಕಾರಣ ಅವರ ಕಡೆಯಿಂದ ನಮಗೆ ಆದಾಯ ಇರಲಿಲ್ಲ ಎಂದರೆ ಸರಿ.

3)ಪೊಲೀಸರಿಗೆ ದೂರನ್ನು ಯಾರು ನೀಡಿದ್ದಾರೆ ಎಂದು ಗೊತ್ತಿಲ್ಲ. ಈ ಕೇಸು ಸಲ್ಲಿಸಿದ ನಂತರವೂ ಫಿರ್ಯಾದಿಯ ಬಗ್ಗೆ ನಾನು ತಿಳಿದುಕೊಂಡಿಲ್ಲ. ಅಪಘಾತವಾದ ಸಮಯದಲ್ಲಿ ನನ್ನ ತಂದೆ ಟಿ ವಿ ಎಸ್ ಎಕ್ಸೆಲ್ ವಾಹನ ಚಲಾಯಿಸುತ್ತಿದ್ದರು. ನನ್ನ ತಂದೆ ಆ ಸಮಯದಲ್ಲಿ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಡಿ ಎಲ್ ಇತ್ತು, ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ಮೊದಲು ನನ್ನ ತಂದೆಯನ್ನು ವಿದ್ಯಾರಣ್ಯ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ವಿದ್ಯಾರಣ್ಯ ಆಸ್ಪತ್ರೆಯಲ್ಲಿ ಹತ್ತು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದರು ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ

ನಿಮ್ಹಾನ್ಸ್ ಆಸ್ಪತ್ರೆಗೆ ಕಳುಹಿಸಲಾಗಿತ್ತು. ಅಲ್ಲಿ ಅವರು ಒಂದು ವಾರ ಚಿಕಿತ್ಸೆ ಪಡೆದು ಅಲ್ಲಿಂದ ಮನೆಗೆ ಕರೆದುಕೊಂಡು ಹೋಗಿರುತ್ತೇವೆ.

4)ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ನನ್ನ ತಂದೆ ಗುಣಮುಖ ಹೊಂದಿದ್ದರಿಂದ ಬಿಡುಗಡೆ ಗೊಳಿಸಿರುತ್ತಾರೆ ಎಂದರೆ ಅವರು ಬದುಕುವ ಸಾಧ್ಯತೆ ಕಡಿಮೆ ಎಂದು ಹೇಳಿ ವೈಧ್ಯರು ಬಿಡುಗಡೆ ಮಾಡಿರುತ್ತಾರೆ. ನಂತರ ನಾವು ನಿಮ್ಹಾನ್ಸ್ ಆಸ್ಪತ್ರೆಗೆ ಹೋಗಿರುವುದಿಲ್ಲ. ಕೆ ಆರ್ ಆಸ್ಪತ್ರೆಯಲ್ಲಿ ಮೂರು ಭಾರಿ ಹೊರರೋಗಿಯಾಗಿ ಚಿಕಿತ್ಸೆ ಕೊಡಿಸಿರುತ್ತೇವೆ. ನಿಮ್ಹಾನ್ಸ್ ಆಸ್ಪತ್ರೆಯಿಂದ ಬಿಡುಗಡೆ ಆದ ಎರಡು ತಿಂಗಳ ಅವಧಿಯಲ್ಲಿ ಮೂರು ಭಾರಿ ಹೊರರೋಗಿಯಾಗಿ ಚಿಕಿತ್ಸೆ ಕೊಡಿಸಿರುತ್ತೇವೆ. ಇದಾದ ನಂತರ ನಾವು 2018 ರವರೆಗೂ ಅವರಿಗೆ ಚಿಕಿತ್ಸೆ ಕೊಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ಹೊರರೋಗಿ ದಾಖಲೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಅವರಿಗೆ ಚಿಕಿತ್ಸೆ ಕೊಡಿಸದಿದ್ದರೂ ಹೆಚ್ಚಿನ ಪರಿಹಾರ ಪಡೆದುಕೊಳ್ಳಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5) ಒಂದು ವೇಳೆ ನನ್ನ ತಂದೆ ಅಪಘಾತದಿಂದಾದ ಗಾಯಗಳಿಂದಾಗಿ ತೀರಿಕೊಂಡಿದ್ದಲ್ಲಿ ಅವರಿಗೆ ಪಿ ಎಂ ಮಾಡಿಸಿ ವರದಿಯನ್ನು ಹಾಜರುಪಡಿಸಬೇಕಾಗಿತ್ತು ಎಂದರೆ ನನ್ನ ತಂದೆ ಮನೆಯಲ್ಲಿಯೇ ತೀರಿಕೊಂಡಿದ್ದರಿಂದ ಮತ್ತು ನಾವೆಲ್ಲರೂ ನೋವಿನಲ್ಲಿ ಇದ್ದ ಕಾರಣ ಪಿ ಎಂ ಮಾಡಿಸಬೇಕು ಎಂಬುದು ನಮಗೆ ತಿಳಿದು ಬಂದಿರಲಿಲ್ಲ. ಅಪಘಾತದಿಂದಾಗಿಯೇ ನನ್ನ ತಂದೆ ತೀರಿಕೊಂಡರು ಎಂಬ ಬಗ್ಗೆ ವೈಧ್ಯರು ನೀಡಿರುವ ಯಾವುದಾದರೂ ಪ್ರಮಾಣ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿ, ಆದರೆ ನನ್ನ ತಂದೆಯ ತಲೆಗೆ ತೀವ್ರ ಪೆಟ್ಟಾಗಿದ್ದರಿಂದ ಅವರು ತೀರಿಕೊಂಡಿದ್ದರು.

ಬೇರೆ ಕಾರಣದಿಂದಾಗಿ ನನ್ನ ತಂದೆ ತೀರಿಕೊಂಡಿದ್ದು ಅಪಘಾತದಿಂದಾದ ಪೆಟ್ಟಿನಿಂದ ತೀರಿಕೊಂಡಿಲ್ಲ ಎಂದರೆ ಸರಿಯಲ್ಲ.

6) ಬಸ್ ಚಾಲಕನ ತಪ್ಪಿನಿಂದ ಅಪಘಾತ ಆಗಿಲ್ಲ ನನ್ನ ತಂದೆಯ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ, ಬಸ್ ಚಾಲಕ ಹಿಂಬದಿಯಿಂದ ನನ್ನ ತಂದೆಗೆ ಡಿಕ್ಕಿ ಪಡಿಸಿರುತ್ತಾನೆ. ಪರಿಹಾರಕ್ಕಾಗಿ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಪ್ರಧಾನ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.